ವೀರಶೈವ ವಿದ್ಯಾವರ್ಧಕ ಸಂಘ, ಬಳ್ಳಾರಿ.
ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯ
ಶ್ರೀ ತೊಗರಿ ವೀರಪ್ಪನವರ ದತ್ತಿ ಆವರಣ, ಅಲ್ಲಂ ಸುಮಂಗಳಮ್ಮ ರಸ್ತೆ, ಗಾಂಧಿನಗರ, ಬಳ್ಳಾರಿ - 583103.
ನ್ಯಾಕ್ ನಿಂದ B ಗ್ರೇಡ್ Accredited by NAAC with B Grade
VEERASAIVA VIDYAVARDHAKA SANGHA, BALLARI.
Smt. Allum Sumangalamma Memorial College for Women
Sri Togari Veerappanavara Datti Avarana, Allum Sumangalamma Road, Gandhi Nagar,
BALLARI - 583103. Karnataka. ☎ (College) 256756. Fax : 08392-257624.
Website : www.smtasmc.org Email : smtasmc@gmail.com

## ಪತ್ರಿಕಾ ಪ್ರಕಟಣೆಗಾಗಿ ಮನವಿ

## ರ್‍ಯಾಂಕ್ ಮತ್ತು ಬಂಗಾರ ಪದಕ ವಿಜೇತ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ

ದಿನಾಂಕ 11.04.17ರಂದು ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯದ 2016–17ನೇ ಸಾಲಿನ ಪ್ರತಿಭಾ ದಿನಾಚರಣೆ ಮತ್ತು ಸರ್ವ ಸಂಘಗಳ ಸಮಾರೋಪ ಸಮಾರಂಭ ಕಾಲೇಜಿನ ಸಭಾಂಗಣದಲ್ಲಿ ನೆರವೇರಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ.ಪಿ.ಪಿ. ಮಳಿಗಿ, ಕುಲಸಚಿವರು, ಮೌಲ್ಯಮಾಪನ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಇವರು ಪ್ರತಿಭಾ ದಿನಾಚರಣೆಯ ಮತ್ತು ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ವಿದ್ಯಾರ್ಥಿಗಳನ್ನು ದೀಪದ ಚಿಲುಮೆಯಿದ್ದಂತೆ, ವಿದ್ಯಾರ್ಥಿಗಳು, ಶಿಕ್ಷಕರು ಮಹಾವಿದ್ಯಾಲಯದಲ್ಲಿ ದೇವರಿದ್ದಂತೆ. ಒಂದು ಸಂಸ್ಥೆ ಸದೃಡವಾಗಿ ಬೆಳೆಯಬೇಕೆಂದರೆ ವಿದ್ಯಾರ್ಥಿಗಳು, ಶಿಕ್ಷಕರು, ಆಡಳಿತ ಮಂಡಳಿಯವರು ಜೊತೆಯಾಗಿ ಸೇರಿ ಪ್ರಾಮಾಣಿಕತೆಯಿಂದ, ದಕ್ಷತೆಯಿಂದ, ಗುರಿಯಿಟ್ಟುಕೊಂಡು ಕೆಲಸ ಮಾಡಬೇಕೆಂದು ಹೇಳಿದರು. ಶಿಕ್ಷಕರು ವಿದ್ಯಾರ್ಥಿಗಳಿಗೆ ಜ್ಞಾನದ ಬೆಳಕನ್ನು ಹರಡಿಸಿ ವಿದ್ಯಾರ್ಥಿಗಳು ತಮ್ಮ ಗುರಿ ಮುಟ್ಟುವವರೆಗೆ ಪ್ರಯತ್ನಿಸಬೇಕೆಂದು ಹೇಳಿದರು. ಯಶಸ್ವಿ ವಿದ್ಯಾರ್ಥಿಗಳಾಗಲು ಗುರಿ ಮತ್ತು ಗುರು ಬಹಳ ಮುಖ್ಯ. ಯಾವ ರೀತಿ ದೀಪ ಮಾತನಾಡದೆ ಬೆಳಕನ್ನು ಚೆಲ್ಲಿ ಪಸರಿಸಿ ಅದರ ಪ್ರತಿಬಿಂಬ ಯಾವ ರೀತಿ ಮಾಡನಾಡುತ್ತದೆಯೋ, ಅದೇ ರೀತಿ ಶಿಕ್ಷಕರು ಕೆಲಸ ಮಾಡಿ ಅವರ ಪ್ರತಿಬಿಂಬವಾದ ವಿದ್ಯಾರ್ಥಿಗಳು ಮಾತನಾಡಬೇಕೆಂದು ಹೇಳಿದರು.

ಒಬ್ಬ ಯಶಸ್ವಿ ವಿದ್ಯಾರ್ಥಿಯ ಜೀವನದಲ್ಲಿ ಐದು ಕಾರ್ಖಾನೆಗಳು ಬಹಳ ಮುಖ್ಯ ಅವುಗಳೆಂದರೆ knowledge factory, Mouth factory, Heart factory, Writing factory and Happy factory, ಈ ಎಲಾ ಕಾರ್ಖಾನೆಗಳು ಸರಿಯಾದ ರಿತಿಯಲ್ಲಿ ಕೆಲಸ ಮಾಡಿದರೆ ಮಾತ್ರ ಯಶಸ್ಸು ಕಟ್ಟಿಟ್ಟ ಬುತ್ತಿ. ವಿದ್ಯಾರ್ಥಿಗಳು ಕಷ್ಟಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಓದಬೇಕು. ಹಣತೆ, ಬತ್ತಿ ಮತ್ತು ದೀಪದ ಎಣ್ಣೆ ಯಾವರೀತಿ ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡಿ ಬೆಳಕನ್ನು ಪಸರಿಸುತ್ತಿದೆಯೋ ಅದೇ ರೀತಿ ವಿದ್ಯಾರ್ಥಿಗಳು, ಶಿಕ್ಷಕರು, ಆಡಳಿತ ಮಂಡಳಿಯವರು, ಪಾಲಕರು ಜೊತೆಯಾಗಿ ಕೆಲಸ ಮಾಡಿದರೆ ಮಾತ್ರ ವಿದ್ಯಾರ್ಥಿಗಳು ಯಶಸ್ಸಿನ ಶಿಖರವನ್ನು ಮುಟ್ಟುವುದು ಶತಸಿದ್ಧ ಎಂದು ಹೇಳಿದರು.

ವೀರಶೈವ ವಿದ್ಯಾವರ್ಧಕ ಸಂಘ, ಬಳ್ಳಾರಿ.

**ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯ**

ಶ್ರೀ ತೋಗರಿ ವೀರಪ್ಪನವರ ದತ್ತಿ ಆವರಣ, ಅಲ್ಲಂ ಸುಮಂಗಳಮ್ಮ ರಸ್ತೆ, ಗಾಂಧಿನಗರ, ಬಳ್ಳಾರಿ - 583103.

ನ್ಯಾಕ್ ನಿಂದ B ಗ್ರೇಡ್ Accredited by NAAC with B Grade

VEERASAIVA VIDYAVARDHAKA SANGHA, BALLARI.

**Smt. Allum Sumangalamma Memorial College for Women**

Sri Togari Veerappanavara Datti Avarana, Allum Sumangalamma Road, Gandhi Nagar,
BALLARI - 583103. Karnataka. ☎ (College) 256756. Fax : 08392-257624.
Website : www.smtasmc.org Email : smtasmc@gmail.com

ಕಾರ್ಯಕ್ರಮ ಅಧ್ಯಕ್ಷತೆಯನ್ನು ವಹಿಸಿಕೊಂಡ ವೀ.ವಿ.ಸಂಘದ ಕಾರ್ಯದರ್ಶಿ ಶ್ರೀ.ಉಡೇದ ಬಸವರಾಜ ಇವರು ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಶುಭಾಶಯಗಳನ್ನು ಕೋರುತ್ತಾ, ವಿದ್ಯಾರ್ಥಿಗಳಲ್ಲಿ ಅಡಗಿದ ಸೂಕ್ತ ಪ್ರತಿಭೆಯನ್ನ ಹೊರತೆಗೆಯುವ ಜವಬ್ದಾರಿ ಶಿಕ್ಷಕರ ಮೇಲಿದೆ. ಈ ಜವಬ್ದಾರಿಯನ್ನ ನಮ್ಮ ಮಹಾವಿದ್ಯಾಲಯದ ಶಿಕ್ಷಕರು ಮಾಡಿದ್ದಾರೆ ಎಂಬುದು ಪ್ರಾಚಾರ್ಯರು ಓದಿದ ಶೈಕ್ಷಣಿಕ ವರದಿಯಲ್ಲಿ ಕಂಡುಬಂದಿತು. ಆ ಎಲ್ಲಾ ಶಿಕ್ಷಕರಿಗೆ ಶುಭಾಶಯವನ್ನು ಕೋರಿದರು.ವೇದಿಕೆಯಲ್ಲಿ ಉಪಸ್ಥಿತರಿರುವ ಶ್ರೀ.ಹಾವಿನಾಳ್ ಶರಣಪ್ಪ, ಕಾರ್ಯಕಾರಿ ಸಮಿತಿಯ ಸದಸ್ಯರು ಇವರು ಶಿಕ್ಷಕರು ಮತ್ತು ವಿದ್ಯಾರ್ಥಿನಿಯರು ವೀ.ವಿ.ಸಂಘದ ಉದ್ದೇಶಗಳನ್ನು ಮನದಟ್ಟು ಮಾಡಿಕೊಂಡು ಕಾರ್ಯೋನ್ಮುಖರಾಗಬೇಕೆಂದು ಹೇಳಿದರು.

ವೇದಿಕೆಯಲ್ಲಿ ಸಹಕಾರ್ಯದರ್ಶಿಗಳಾದ ಶ್ರೀ ಐಗೋಳ್ ಚಿದಾನಂದ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ.ಹೆಚ್.ಎಂ.ಗುರುಶಿದ್ದ ಸ್ವಾಮಿ, ಶ್ರೀ.ಹಾವಿನಾಳ್ ಶರಣಪ್ಪ, ಶ್ರೀ.ಕೊರ್ಲಗುಂದಿ ಬಸವರಾಜ, ಶ್ರೀ. ಬಾಣಾಪುರ ನಾಗಭೂಷಣ ಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷಣಿ ಡಾ.ಭಾಗ್ಯಲಕ್ಷ್ಮಿ, ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ. ಕುಪ್ಪಗಲ್ ಗಿರಿಜ, ಪದವಿ ಕಾಲೇಜಿನ ಪ್ರಾಚಾರ್ಯರಾದ ಡಾ.ಎಂ.ಪಂಪಾಪತಿ, ಪದವಿ ಪೂರ್ವ ಪ್ರಾಚಾರ್ಯರಾದ ಶ್ರೀ.ಬಿ.ಪಂಚಾಕ್ಷರಪ್ಪ, ವಿದ್ಯಾರ್ಥಿನಿಯರ ಸಂಘದ ಕಾರ್ಯದರ್ಶಿಗಳಾದ ಕು.ಆಶಾ ಪಿ. ಶಿರ್ಶಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶೈಕ್ಷಣಿಕ ವರ್ಷದ ವರದಿಯನ್ನು ಡಾ.ಎಂ. ಪಂಪಾಪತಿ, ಪ್ರಾಚಾರ್ಯರು ಮಂಡಿಸಿದರು. ಕು.ಶೀತಲ್, ಕು.ವೈಷ್ಣವಿ, ಕು.ನಂದಿನಿ, ಕು.ಅನುಷ, ಇವರುಗಳ ಪ್ರಾರ್ಥನೆ ಮತ್ತು ನಾಡಗೀತೆಯೊಂದಿಗೆ ಪ್ರಾರಂಭಗೊಂಡಿತು. ಡಾ.ವಿ.ಎಸ್. ಪ್ರಭಯ್ಯ ಸರ್ವರನ್ನು ಸ್ವಾಗತಿಸಿದರು. ಶ್ರೀ. ಯು. ಸೋಮಶೇಖರ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಕು.ಶಾಂತಕುಮಾರಿ ಹಾಗೂ ಶೈಲಜ ಕಾರ್ಯಕ್ರಮವನ್ನು ನಿರೂಪಿಸಿದರೆ ಕು.ಪವಿತ್ರ ಬಿ.ಕಾಂ. ಪ್ರಥಮ, ವಂದನಾರ್ಪಣೆಯನ್ನು ಸಲ್ಲಿಸಿದರು.
ವೇದಿಕೆಯ ಕಾರ್ಯಕ್ರಮದ ನಂತರ ವಿದ್ಯಾರ್ಥಿನಿಯರಿಂದ ರಂಗುರಂಗಿನ ಸಾಂಸ್ಕೃತಿಕ ಚಟುವಟಿಕೆಗಳು ಜರುಗಿದವು.

* * *